**ಸಾಕ್ಷಿಯನ್ನು ದಿನಾಂಕಃ 29.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಡಿ.ಸಿ, ವಕೀಲರಿಂದಃ**

ನಾನು ಕಳೆದ 11 ವರ್ಷಗಳಿಂದ ಅರಣ್ಯ ವಲಯ ಕಛೇರಿಯಲ್ಲಿ ದಲಾಯತ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ದರ್ಜೆಗೆ ಸಂಬಂಧಿಸಿದ ಕೆಲಸಗಳು ಕಛೇರಿಗೆ ಸಂಬಂಧಿಸಿದ ಕೆಲಸಗಳಾಗಿರುತ್ತವೆ ಎಂದರೆ ಸರಿ. ಅರಣ್ಯ ಪ್ರದೇಶದಲ್ಲಿ ಅರಣ್ಯ ಗಸ್ತು ಅರಣ್ಯ ಪಾಲಕರು ಗಸ್ತು ತಿರುಗುತ್ತಾರೆ ಎಂದರೆ ಸರಿ. ದಿನಾಂಕ 24.05.2014 ರಂದು ಕಾಳನಮುಂಟಿಯಲ್ಲಿರುವ ಸೋಲಾರ್ ಶೆಡ್ ನಲ್ಲಿ ಕೆಲಸ ಮಾಡುತ್ತಿದ್ದೆ. ಆ ದಿವಸ ನನ್ನನ್ನು ಕಳ್ಳಬೇಟೆ ತಡೆ ಶಿಬಿರಕ್ಕೆ ನೇಮಿಸಿದ್ದ ಬಗ್ಗೆ ಪೊಲೀಸರು ದಾಖಲೆ ಪಡೆದಿಲ್ಲ. ಆ ದಿವಸ ನಾನು, ಚಾಸಾ-1, 2 ಮತ್ತು 5 ಇದ್ದೆವು. ಗಸ್ತಿಗೆ ಹೋದಾಗ ಶಿಬಿರದಲ್ಲಿ ಯಾರು ಇರುವುದಿಲ್ಲ. ನಾವು ಗಸ್ತಿಗೆ ಹೋಗುವ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ತಿಳಿಸುವುದಿಲ್ಲ. ಬಳ್ಳೂರುಹುಂಡಿ ಅರಣ್ಯ ಪ್ರದೇಶದಿಂದ ಕಾಳನಮುಂಟಿ ಅರಣ್ಯ ಪ್ರದೇಶಕ್ಕೆ ಸುಮಾರು 200 ಮೀಟರ್ ದೂರವಿರುತ್ತದೆ. ಕರಿಕಲ್ಲುಮಂಟಿ ಅರಣ್ಯ ಪ್ರದೇಶದ ಮೇಲ್ಭಾಗಕ್ಕೆ ನಾನು ಮತ್ತು ಚಾಸಾ-5 ಹೋಗಿರುತ್ತೇವೆ ಮತ್ತು ಇನ್ನೊಂದು ದಿಕ್ಕಿಗೆ ಚಾಸಾ-1 ಮತ್ತು 2 ಹೋಗಿರುತ್ತಾರೆ. ಆ ದಿವಸ ಚಾಸಾ-1 ರವರಿಗೆ ಬಂದೂಕನ್ನು ಕೊಟ್ಟಿದ್ದರು, ನಮಗೆ ಕೊಟ್ಟಿರಲಿಲ್ಲ. ನಾವು 5 ಕಿ.ಮೀಟರ್ ಗಸ್ತು ಹೋಗಿ ಪುನಃ ವಾಪಸ್ ಬರುತ್ತೇವೆ. ಅದೇ ರೀತಿ ಇನ್ನೊಂದು ದಿಕ್ಕಿಗೆ ಹೋದ ಸಿಬ್ಬಂದಿಗಳು 5 ಕಿ.ಮೀಟರ್ ಹೋಗಿ ವಾಪಸ್ ಬರುತ್ತಾರೆ. ನಾವು 5 ಕಿ.ಮೀಟರ್ ಹೋದಾಗ ಅಲ್ಲಿ ಯಾವುದೇ ತಂಗುದಾಣ ಇರುವುದಿಲ್ಲ, ಪುನಃ ಶಿಬಿರದ ಕಡೆ ಬರಬೇಕಾಗುತ್ತದೆ. ಹೆಡಿಯಾಲ ಅರಣ್ಯ ಪ್ರದೇಶ ಸುಮಾರು 32 ಕಿ.ಮೀ ಸುತ್ತುವರಿದ ಪ್ರದೇಶವಾಗಿರುತ್ತದೆ. ಕರಿಕಲ್ಲುಮಂಟಿ ಅರಣ್ಯ ಪ್ರದೇಶ 6 ಕಿ.ಮೀ ಸುತ್ತಳತೆ ದೂರವಿರುತ್ತದೆ. ಸದರಿ ಪ್ರದೇಶವನ್ನು ಒಂದೇ ದಿನದಲ್ಲಿ

ಸುತ್ತುವರಿದು ಬರಲಾಗುವುದಿಲ್ಲ ಎಂದರೆ ಸರಿ. ಆದ್ದರಿಂದ ಸಿಬ್ಬಂದಿಗಳನ್ನು ಬೇರೆ–ಬೇರೆ ಪ್ರದೇಶಕ್ಕೆ ನಿಯೋಜಿಸುತ್ತಾರೆ ಎಂದರೆ ಸರಿ. ಬೇರೆ–ಬೇರೆ ಕಡೆ ಹೋದ ನಂತರ ಪುನಃ ಭೇಟಿಗೆ ಅವಕಾಶವಿರುವುದಿಲ್ಲವೆಂದರೆ ಮಧ್ಯಭಾಗದಲ್ಲಿ ಭೇಟಿಯಾಗುತ್ತೇವೆ. ಬೆಳಿಗ್ಗೆ 9.30 ಗಂಟೆಗೆ ಹೋದರೆ ಸುಮಾರು 10–30–11.00 ಗಂಟೆಗೆ ಮತ್ತೊಂದು ಕಡೆಗೆ ಹೋದ ಸಿಬ್ಬಂದಿಗಳನ್ನು ಭೇಟಿಯಾಗುತ್ತೇವೆ. ನಮ್ಮ ಬಳಿ ನಿಸ್ತಂತು ಸಂದೇಶದ ಯಂತ್ರವಿರುವುದಿಲ್ಲ. ಹೆಡಿಯಾಲ ಅರಣ್ಯ ಪ್ರದೇಶವು ದಟ್ಟವಾದ ಮರಗಳಿರುವ ಅರಣ್ಯ ಪ್ರದೇಶವಾಗಿರುತ್ತದೆ. ಒಂದು ಪ್ರದೇಶದಿಂದ ನಿಂತು ನೋಡಿದರೆ ಸುಮಾರು 50 ಮೀಟರ್ ವರೆಗೆ ಬೇರೆಯವರು ಇರುವುದು ಕಾಣುತ್ತದೆ. ಕರಿಕಲ್ಲುಮಂಟಿ ಅರಣ್ಯ ಪ್ರದೇಶ ಬಳ್ಳೂರುಹುಂಡಿ ಅರಣ್ಯ ಪ್ರದೇಶವಾಗಿರುತ್ತದೆ ಎಂದರೆ ಸರಿ. ಎಲ್ಲಾ ಸಿಬ್ಬಂದಿಗಳನ್ನು ಒಂದೇ ಕಡೆ ನಿಯೋಜನೆ ಮಾಡುವುದಿಲ್ಲ ಎಂದರೆ ಸರಿ. ಕಳ್ಳಬೇಟೆ ತಡೆ ಶಿಬಿರದಿಂದ ಬಳ್ಳೂರುಹುಂಡಿ ಅರಣ್ಯ ಪ್ರದೇಶಕ್ಕೆ ಸುಮಾರು 2 ಕಿ.ಮೀ ದೂರವಿರುತ್ತದೆ. ಬಳ್ಳೂರುಹುಂಡಿಯಿಂದ ಕರಿಕಲ್ಲುಮಂಟಿಗೆ ಸುಮಾರು 5 ಕಿ.ಮೀ ದೂರವಿರುತ್ತದೆ. ಆ ದಿವಸ ನನ್ನ ಜೊತೆ ಚಾಸಾ–5 ಇದ್ದರು. ಕಾಡುಪ್ರಾಣಿಗಳಿಂದ ರಕ್ಷಣೆ ಮಾಡಿಕೊಳ್ಳಲು ನಮಗೆ ಮಚ್ಚು ಮತ್ತು ದೊಣ್ಣೆಯನ್ನು ಕೊಟ್ಟಿರುತ್ತಾರೆ. ನಾವು 600–700 ಮೀಟರ್ ದೂರದಲ್ಲಿದ್ದಾಗ ಗಲಾಟೆ ಶಬ್ದ ಕೇಳಿಸಿರುತ್ತದೆ. ಈ ರೀತಿ ಶಬ್ದ ಕೇಳಿದ ನಂತರ ನಾನು ಮತ್ತು ಚಾಸಾ–5 ಓಡಿಹೋಗಿರುತ್ತೇವೆ . ನಾವಿದ್ದ ಸ್ಥಳದಿಂದ 10–15 ನಿಮಿಷದಲ್ಲಿ ಗಲಾಟೆ ನಡೆದ ಸ್ಥಳಕ್ಕೆ ಹೋಗಿರುತ್ತೇವೆ. ನಾನು ಹೋಗುವಷ್ಟರಲ್ಲಿ ಗಲಾಟೆ ಮುಗಿದಿತ್ತು. ಅರಣ್ಯ ಪ್ರದೇಶದ ಪಕ್ಕದಲ್ಲಿ 1 ನೇ ಆರೋಪಿ ಜಮೀನು ಇರುತ್ತದೆ ಎಂದರೆ ಸರಿ. ಆ ಸಂದರ್ಭದಲ್ಲಿ 1 ನೇ ಆರೋಪಿ ತಮ್ಮ ಜಮೀನಿನಲ್ಲಿ ಬೆಳೆ ಬೆಳೆದಿದ್ದರು ಎಂದರೆ ಸರಿ. ಗಲಾಟೆ ಸ್ಥಳದಲ್ಲಿ ಏನು ನಡೆದಿರುತ್ತದೆ ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕಾಡುಪ್ರಾಣಿಗಳು ಪಕ್ಕದಲ್ಲಿರುವ

ವ್ಯವಸಾಯದ ಜಮೀನಿಗೆ ಹೋಗಿ ಬೆಳೆಗಳನ್ನು ಹಾಳು ಮಾಡುತ್ತವೆ ಎಂದರೆ ಸರಿ. 1 ನೇ ಆರೋಪಿ ನಮ್ಮ ಅರಣ್ಯ ಕಛೇರಿಗೆ ಬಂದು ಕಾಡುಪ್ರಾಣಿಗಳು ವ್ಯವಸಾಯದ ಜಮೀನಿಗೆ ಬಂದು ಬೆಳೆಗಳನ್ನು ಹಾಳು ಮಾಡಿರುತ್ತವೆ ಎಂದು ಗಲಾಟೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳುತ್ತೇನೆ ಎಂದರೆ ಸರಿ. ಆ ದಿವಸ ಆರೋಪಿಗಳು ಯಾವ ತರಹದ ಬಟ್ಟೆ ಧರಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ನೋಡಿದಾಗ ಮಚ್ಚು 1 ನೇ ಆರೋಪಿ ಬಳಿಯಿತ್ತು. ನಾನು ನೋಡಿದಾಗ ಮಚ್ಚಿನಲ್ಲಿ ರಕ್ತದ ಕಲೆಯಿತ್ತು. 2 ನೇ ಆರೋಪಿ ಚಾಸಾ-1 ರವರ ಕಪಾಳಕ್ಕೆ ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ, ನಾನು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**